ಆಸಕ್ತಿಯಾಗಲಿ, ಅನುಕೂಲವಾಗಲಿ ಇರಲಿಲ್ಲ. ಬೀಡಿಯ ಹೊಗೆಯಲ್ಲಿ ಸುರಳಿ ಸುರಳಿಯಾಗಿ ತನ್ನ ಆಯಸ್ಸನ್ನೇ ಬಿಟ್ಟುಬಿಟ್ಟಿದ್ದ ಅಪ್ಪ. ನಮಗಿದ್ದ ಒಂದು ಎಕರೆ ಜಾಗದಲ್ಲಿ ಎಷ್ಟು ಗೇಯ್ದರೂ ಹೊಟ್ಟೆಗೆ ಸಾಕಾಗ್ತಾ ಇರ್ಲಿಲ್ಲ. ಅಪ್ಪನ ಹೊಲವನ್ನ ನಂಬಿಕೊಂಡಿದ್ದ ತಮ್ಮನಿಗೆ ಆ ನಂಬಿಕೆಯನ್ನ ಕೊಟ್ಟು ನಾನು ಬೆಂಗಳೂರಿಗೆ ಬಂದ್ಬಿಟ್ಟೆ. ಇಲ್ಲಿಗೆ ಬಂದಮೇಲೆ, ಒಂದು ಶಾಲೇಲಿ ಮೇಷ್ಟ್ರು ಕೆಲಸ ಸಿಕ್ತು. ಇಪ್ಪತ್ತು ರೂಪಾಯಿ ಸಂಬಳ. ಶಾಲೆ ಮುಗಿದ ಮೇಲೆ ಚಿಕ್ಕಪೇಟೆಯಲ್ಲಿ ಒಂದು ಸೀರೆ ಅಂಗಡಿಯ ಅಕೌಂಟ್ಸ್, ಲೆಕ್ಕ ಬರೆದುಕೊಡುತ್ತಿದ್ದೆ. ಇದೇ ಸಮಯದಲ್ಲಿ ಜೇಪಿ ಚಳವಳಿ ಬಿಹಾರದಲ್ಲಿ ಬಿಸಿಯೇರಿ ಸಮಾಜವಾದದ ಬೆಳಕು ಎಲ್ಲ ಕಡೆ ಹರಡುತ್ತಿತ್ತು. ನಾನು ಕೂಡ ಅದರ ಸೆಳೆತಕ್ಕೆ ಸಿಕ್ಕಿ, ಎರಡು ವರ್ಷ ಸಂಜೆ ಆದ್ರೆ ಕೂಟ ಸೇರೋದು, ದೇಶದ ಸ್ಥಿತಿ ಗತಿಗಳನ್ನ ಚರ್ಚೆ ಮಾಡೋದು. ಎಲ್ಲಾ ಕಡೆ ಸಂಪೂರ್ಣ ಕ್ರಾಂತಿಯದ್ದೇ ಮಾತುಕತೆ. ಹೀಗಿರಬೇಕಾದರೆ ಎಮರ್ಜೆನ್ಸಿ ಘೋಷಣೆ ಆಯಿತು. ಎಲ್ಲಾ ವಿರೋಧ ಪಕ್ಷದ ನಾಯಕರನ್ನ ಜೈಲಿಗೆ ತಳ್ಳಿದರು. ಆಮೇಲೆ, ಜೇಪಿ ತೀರಿಕೊಂಡರು. ಜನತಾ ಪಾರ್ಟಿ ಅಧಿಕಾರಕ್ಕೆ ಬಂತು. ಅಲ್ಲಿಗೆ ಕ್ರಾಂತಿ ಜೊತೆಗೆ ಸಮಾಜವಾದವೂ ಮುಗಿಯಿತು. ನಾವು ಮತ್ತೆ ನಮ್ಮ ನಮ್ಮ ಹೊಟ್ಟೆಪಾಡಿಗಾಗಿ ದುಡಿಮೆಯ ಮೇಲೆ ಗಮನಹರಿಸೋದು ಅನಿವಾರ್ಯವಾಯಿತು. ಈ ಸಮಯದಲ್ಲಿ ಒಂದು ದಿನ ಸಿಟಿ ಮಾರ್ಕೆಟ್ ಬಸ್‌ಸ್ಟ್ಯಾಂಡ್‌ನಲ್ಲಿ ಬಸ್ಸಿಗಾಗಿ ಕಾಯುತಿದ್ದೆ. ಅಲ್ಲೇ ಇದ್ದ ಮತ್ತೊಬ್ಬ ಪದೇ ಪದೇ ತನ್ನ ಕೈ ಗಡಿಯಾರ ನೋಡಿಕೊಳ್ಳುತ್ತಿದ್ದ. ಅದೋ ಬೀದಿ ದೀಪದ ಬೆಳಕಿಗೆ ಥಳ ಥಳ ಹೊಳೆಯುತ್ತಿತ್ತು. ನೋಡೋಕೆ ರೋಲೆಕ್ಸ್ ಇದ್ದ ಹಾಗೆ ಇತ್ತು. ಒಂದು ಸಲ ಹತ್ತಿರದಿಂದ ನೋಡಬೇಕಲ್ಲ ಅಂತ ಇನ್ನೂ ಹತ್ತಿರಕ್ಕೆ ಹೋದೆ, ಸುಮ್ನೆ ಏನೋ ಒಂದು ಮಾತು ಶುರು ಮಾಡೋಣ ಅಂತ.

"ಟೈಮ್ ಎಷ್ಟು ಸರ್" ಅಂದೆ. ನನ್ನನ್ನ ಅನುಮಾನದಿಂದ ನೋಡಿ, "ಏಳು ಗಂಟೆ" ಅಂದ.

"ಎಲ್ಲಿಗೆ ಹೋಗ್ತಾ ಇದ್ದೀರಾ."

"ಹನುಮಂತ ನಗರ."

"ಓ ಅಲ್ಲಿಗಾ... ನಂದೂ ಅದೇ ಕಡೆ, ಒಂದು ಸ್ಟಾಪ್ ಹಿಂದೆ. ಮತ್ತೆ ಎಷ್ಟು ಹೊತ್ತಿಗೆ ಬರುತ್ತೆ ಬಸ್" ಅಂತ ಹೀಗೆ ಮಾತಾಡೋಕೆ ಶುರು ಮಾಡಿದೆ.

ಆ ವ್ಯಕ್ತಿಗೆ ಏನೋ ಆತಂಕ. ನನ್ನ ಪ್ರಶ್ನೆಗಳಿಗೆಲ್ಲ ಒಂದೊಂದೇ ಪದದ ಉತ್ತರ. ಸರಿ, ಕೊನೆಗೆ ಮೆಜೆಸ್ಟಿಕ್ ಕಡೆಯಿಂದ ಹೊರಲಾಗದ ಹೊಟ್ಟೆಯ ಭಾರವನ್ನ ಹೊತ್ತು, ಒಳಗಿದ್ದನೆಲ್ಲ ಒಮ್ಮೆ ಒದರಿ ತನ್ನ ಹೊಟ್ಟೆಯನ್ನ ಹಗುರ ಮಾಡಿಕೊಳ್ಳಲು ಬಂದು ನಿಂತಿತು ಬಸ್ಸು. ನಾನು ಆ ಕಡೆಯಿಂದ ಹೋಗಿ ನನ್ನ ಬ್ಯಾಗ್ ಒಳಗಿದ್ದವರಿಗೆ ಕೊಟ್ಟು ಸೀಟ್ ರಿಸರ್ವ್ ಮಾಡಿದೆ. ಈ ವ್ಯಕ್ತಿಗೆ ನನ್ನ ಪಕ್ಕದಲ್ಲೇ ಜಾಗ ಕೊಟ್ಟೆ. ನನ್ನ ಶ್ರಮದಿಂದ ಸೀಟ್ ಸಿಕ್ತು. ಆದರೂ ಆ ಮನುಷ್ಯ ಒಂದು ಕೃತಜ್ಞತೆ ಬೇಡ, ಸಣ್ಣ ನಗು ಕೂಡ ಕೊಡಲಿಲ್ಲ. ಅಷ್ಟರಲ್ಲಿ ನಮ್ಮ ಹಿಂದಿನ ಸೀಟ್‌ನಲ್ಲಿ ಯಾರೋ ನನ್ನ ಹಾಗೆ ಪಾಪ ರಿಸರ್ವ್ ಮಾಡಲಿಕ್ಕೆ ಹಾಕಿದ್ದ ಕರವಸ್ತ್ರವನ್ನು ಕೆಳಗೆಸೆದು ಯಾರೋ ಕೂತುಬಿಟ್ಟರು. ಇಬ್ಬರಿಗೂ ಜಗಳ.

"ನಾನು ನನ್ನ ಕರ್ಚಿಫ್ ಇಲ್ಲಿ ಹಾಕಿದ್ದೆ, ಏಳಯ್ಯ ಮೇಲೆ" ಅಂತ ಒಬ್ಬ.

ಅದಕ್ಕೆ ಕೂತಿದ್ದೋನು, "ಡ್ರೈವರ್ ಸೀಟ್‌ನಿಂದ ಕೊನೆವರೆಗೆ ನಿನ್ ಪಂಚೆ ಕಟ್ಟಿಟ್ರೆ ಇಡೀ ಬಸ್ಸು ನಿನ್ನದಾಗುತ್ತ" ಎಂದು ಜಬರು ಮಾಡಿದ.

"ಸೀಟ್ ಮನೆ ಹಾಳಾಯ್ತು, ಹೋಗ್ಲಿ, ನನ್ನ ಕರ್ಚಿಫ್ ಕೊಡಯ್ಯ" ಅಂತ ನಿಂತಿದ್ದೋನು.

"ಅದ್ಯಾವ್ದೋ ಒರೆಸೋ ಬಟ್ಟೆ, ಆ ಗಲೀಜ್ ಮೇಲೆ ಕೂತ್ಕೊಳ್ಳೋಕ್ಕೆ ಆಗುತ್ತಾ, ಅಲ್ಲೇ ಎಲ್ಲೊ ಕೆಳಗೆ ಬಿದ್ದಿರಬೇಕು" ಅಂತ ಕೂತಿದ್ದವನು ಅಂದ.

ಇನ್ನೇನು ಮಾರಾಮಾರಿ ಶುರುವಾಗುತ್ತೆ ಅಂತ ಕಾಯ್ಕೊಂಡು ತಮಾಷೆ ನೋಡ್ತಿದ್ದರು ಎಲ್ಲರೂ.